ಎಲ್.ಎಸ್.ಎಸ್. ಅವರನ್ನೂ ದಿಗ್ಭ್ರಮೆಗೊಳಿಸಿದೆ. ಹ್ಯೂಬ್ರಿಸ್‌ಗೆ (ಪಾಪಕೃತ್ಯ) ಶಿಕ್ಷೆ ಕೊಡುವ ದೇವತೆಗಳಿಗೆ ಮನುಷ್ಯರಲ್ಲಿ ಅಸೂಯೆ ಇಲ್ಲ. ಆದರೆ ಭಾಗ್ಯದ ಶಿಖರ ಏರುತ್ತಾ ಮನುಷ್ಯ ಮದಗೊಂಡು ಮಾಡುವ ಅಪರಾಧಗಳಿಗೆ ಶಿಕ್ಷೆ ಅನುಭವಿಸಲೇಬೇಕಾಗುತ್ತದೆ. ಈ ನೆಲೆಗಳಲ್ಲಿ ಮನುಷ್ಯನ ಅಂತರಂಗ ಹಾಗೂ ಬಹಿರಂಗ ಕ್ರಿಯೆಗಳ ಸಂಬಂಧವನ್ನೂ ಎಲ್.ಎಸ್.ಎಸ್. ಹುಡುಕುತ್ತಾರೆ. ಈ ಗುಣ ಸ್ಪಷ್ಟವಾಗಿ ಆಧುನಿಕ ವಿಮರ್ಶಾ ಪರಿಕಲ್ಪನೆಗಳನ್ನು ಒಪ್ಪಿಕೊಂಡ ವಿದ್ವಾಂಸರ ಚಿಂತನಾಕ್ರಮ ಎಂದು ವಿವರಿಸಬೇಕಾದ ಅಗತ್ಯವಿಲ್ಲ.

**ಶೇಕ್ಸ್‌ಪಿಯರ್ ಅಧ್ಯಯನ**

ಎಲ್.ಎಸ್.ಎಸ್. ಅವರ ಯುರೋಪಿಯನ್ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯ ಹಾಗೂ ಶೇಕ್ಸ್‌ಪಿಯರ್ ಅಧ್ಯಯನಗಳನ್ನು ಅವರ ಗ್ರೀಕ್ ಸಾಹಿತ್ಯ ಅಧ್ಯಯನದ ಮುಂದುವರಿದ ಭಾಗವಾಗಿ ನೋಡಬೇಕು. 1987ರಿಂದ 2016ರವರೆಗೆ ಪ್ರಕಟವಾಗುತ್ತಾ ಬಂದ ಅವರ ಶೇಕ್ಸ್‌ಪಿಯರ್ ಅಧ್ಯಯನ ಕೃತಿಯ ಪರಿಷ್ಕೃತ ಆವೃತ್ತಿಗಳು ಅವರ ನಿರಂತರ ಅಧ್ಯಯನಶೀಲ ಮನೋವೃತ್ತಿಗೆ ಹಾಗೂ ಶೇಕ್ಸ್‌ಪಿಯರ್ ಅಧ್ಯಯನದಲ್ಲಿ ಅವರಿಗಿದ್ದ ತನ್ಮಯತೆಗೆ ಸಾಕ್ಷಿಯಾಗಿದೆ.

ಗ್ರೀಕರ ಹ್ಯೂಬ್ರೀಸ್ ತಾತ್ವಿಕತೆ ಶೇಕ್ಸ್‌ಪಿಯರ್ ಬರಹಗಳಲ್ಲಿ ಮುಂದುವರಿದ ಹಾಗೂ ಬದಲಾದ ಕ್ರಮಗಳನ್ನು ಎಲ್.ಎಸ್.ಎಸ್. ಅವರ ಶೇಕ್ಸ್‌ಪಿಯರ್ ವಿಮರ್ಶೆ ಗುರುತಿಸುತ್ತದೆ. ಗ್ರೀಕ್ ಸಾಹಿತ್ಯ ತಳಹದಿಯೊಂದಿಗೆ ಬೆಳೆದ ಅವರ ಯುರೋಪಿಯನ್ ಸಾಹಿತ್ಯ ಚಿಂತನೆಗಳಲ್ಲಿ ಇದೊಂದು ಉದಾಹರಣೆ ಮಾತ್ರ. ದುಷ್ಟತನ ಅಥವಾ ಇವಿಲ್(evil)ನ ಸ್ವರೂಪಗಳನ್ನು 'ಹ್ಯಾಮ್ಲೆಟ್', 'ಒಥೆಲೊ', 'ಮ್ಯಾಕ್‌ಬೆತ್' ಹಾಗೂ 'ಕಿಂಗ್ ಲಿಯರ್' ನಾಟಕಗಳು ಪರೀಕ್ಷಿಸುತ್ತವೆ. ಆದರೆ ಅವು ಕೇವಲ ಕ್ರಿಶ್ಚಿಯನ್ ತಾತ್ವಿಕತೆಯ ಮುಂದುವರಿದ ರೂಪಗಳು. ಅದು ಗ್ರೀಕರ ಹ್ಯೂಬ್ರಿಸ್ ಪರಿವರ್ತನೆಯಾದ ಕ್ರಮವೂ ಹೌದು ಎಂಬುದು ಅವರ ವಿಮರ್ಶೆಯ ಕೇಂದ್ರ ಚಿಂತನೆ.

ಪರಿಪೂರ್ಣ ಕ್ಷಮೆ ತೋರಿಸುವುದು ಎಷ್ಟು ಕಷ್ಟ ಎಂಬುದನ್ನು 'ಮರ್ಚೆಂಟ್ ಆಫ್ ವೆನಿಸ್'ನ ಪೋರ್ಷಿಯಾ ತೋರಿಸಿಕೊಟ್ಟಿದ್ದಾಳೆ. ಮನುಷ್ಯ ತನಗೆ ತಾನೇ ಸೃಷ್ಟಿಸಿಕೊಂಡ ವ್ಯವಸ್ಥೆಯಲ್ಲಿ ಆತ ಉದಾತ್ತನಾಗುವುದನ್ನು ಬಿಟ್ಟು ಯಾಕೆ ಕ್ರೂರಿಯೂ, ಪಾಪಿಯೂ ಆಗುತ್ತಾನೆ? ಮನುಷ್ಯನಲ್ಲಿ ದುಷ್ಟತನದ ಪ್ರವೇಶಕ್ಕೆ ಎಡೆಗೊಡುವ ಅಂಶಗಳಾವುವು? ಎಂಬುದು ಎಲ್.ಎಸ್.ಎಸ್. ಅವರನ್ನು ಬಹುವಾಗಿ ಕಾಡಿದೆ. 'ಮನುಷ್ಯನೇ ತನಗಾಗಿ ಸೃಷ್ಟಿಸಿದ ಹಣ ಅವನ ಸಾಮಾಜಿಕ ವರ್ತನೆಯನ್ನು ನಿರ್ಧರಿಸುತ್ತದೆ' ಎಂಬ ಶೇಕ್ಸ್‌ಪಿಯರನ ಚಿಂತನಾ ತಿರುಳನ್ನು ವಿವರಿಸುವಾಗ ಎಲ್.ಎಸ್.ಎಸ್. ಅವರಿಗೆ 'ಇಂದಿನ ಸಮಾಜದಲ್ಲಿ ಹಣ ಮನುಷ್ಯನನ್ನು ಪರಕೀಯನನ್ನಾಗಿ ಮಾಡುತ್ತದೆ' ಎಂಬ ಕಾರ್ಲ್‌ಮಾರ್ಕ್ಸ್‌ನ ಮಾತು ನೆನಪಾಗುತ್ತದೆ. ಇದು ಎಲ್.ಎಸ್.ಎಸ್. ಅವರು ಅಭಿಜಾತ ಕೃತಿಯೊಂದನ್ನು ತಮ್ಮ ವಿಮರ್ಶೆಯಲ್ಲಿ ಸಮಕಾಲೀನಗೊಳಿಸುವ ಕ್ರಮ. ಕಿಂಗ್ ಲಿಯರ್ ಹೇಳಿದ 'ಮಾಗುವಿಕೆ, ಬದುಕಿನಲ್ಲಿ ಮಾಗುವಿಕೆ ಮುಖ್ಯ' (Ripeness is all) ಎಂಬ ಮಾತು ಶೇಕ್ಸ್‌ಪಿಯರನ ಜೀವನತತ್ವ. ಗ್ರೀಕರ ಹ್ಯೂಬ್ರಿಸ್ ಹಾಗೂ ಕ್ರಿಶ್ಚಿಯನ್ನರ ತಾತ್ವಿಕತೆಯ ದುಷ್ಟತನ ಸೇರಿ ಉಂಟಾಗುವ 'ಇವಿಲ್'ನ ಸಂಕೀರ್ಣ ಸ್ವರೂಪದೆಡೆಗೆ ಎಲ್.ಎಸ್.ಎಸ್. ಓದುಗರ ಗಮನವನ್ನು ಸೆಳೆಯುತ್ತಾರೆ.

ಶೇಕ್ಸ್‌ಪಿಯರ್ ಬದುಕಿನ ಮೂಲಭೂತ ಪ್ರಶ್ನೆಗಳ ಮೂಲಕ ಜೀವನದರ್ಶನವನ್ನು ಹೇಗೆ ಕಾಣಿಸುತ್ತಾನೆಂಬುದನ್ನು ಎಲ್.ಎಸ್.ಎಸ್. ವಿಮರ್ಶೆ ತೋರಿಸಿಕೊಡುವ ಕ್ರಮವೇ ಒಂದು ಸೊಗಸು. ವಿಶ್ವದಲ್ಲಿ ಮನುಷ್ಯನ ಸ್ಥಾನವೇನು? ಮನುಷ್ಯನ ಏಳುಬೀಳುಗಳಲ್ಲಿ ಅವನ ನೈತಿಕ ಹೊಣೆ ಎಷ್ಟು? ಮನುಷ್ಯನ ಬದುಕಿನಲ್ಲಿ ಕಣ್ಣಿಗೆ ಕಾಣದ ಶಕ್ತಿಗಳ ಕೈವಾಡ ಎಷ್ಟು? ಮನುಷ್ಯ ಬದುಕಬೇಕು ಯಾಕೆ? (ಗ್ಲಸ್ಟರ್‌ನ ಆತ್ಮಹತ್ಯಾ ಪ್ರಯತ್ನದ ಹಿನ್ನೆಲೆಯಲ್ಲಿ) ಇಂತಹ ಜಿಜ್ಞಾಸೆಗಳ ಮೂಲಕ ಶೇಕ್ಸ್‌ಪಿಯರ್ ತನ್ನ ಜೀವನ ದರ್ಶನವನ್ನು ಕಾಣಿಸುತ್ತಾನೆ. ಎಲ್ಲದಕ್ಕೂ ಶೇಕ್ಸ್‌ಪಿಯರ್‌ನಲ್ಲಿ ಉತ್ತರಗಳಿವೆ ಎಂದಲ್ಲ. ಆದರೆ ಪ್ರಶ್ನೆಗಳಿವೆ. ಅವುಗಳಿಗೆ ಆತನ ಕೃತಿಗಳಲ್ಲಿ ಉತ್ತರಗಳನ್ನು ಹುಡುಕುವ ಮೂಲಕ ಕವಿಯ ಜೀವನ ದರ್ಶನ ಗೋಚರಿಸಬೇಕು.

ಅನೇಕ ಪ್ರಶ್ನೆಗಳಿಗೆ ನೇರ ಉತ್ತರಗಳಿಲ್ಲ. ಯಾಕೆಂದರೆ, ಎಷ್ಟೇ ಪ್ರಯತ್ನಿಸಿದರೂ ಬಾಳಿನ ಹೃದಯದಲ್ಲಿ ಮನುಷ್ಯ ಎಂದೂ ಬಿಡಿಸಲಾರದ ನಿಗೂಢತೆ ಇದೆ. ಈ ರಹಸ್ಯವನ್ನು ಎಲ್.ಎಸ್.ಎಸ್. ಅವರು ಹೇಳುವಂತೆ: